ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ,
ಯಳಂದೂರು.

**CC** 440/2019

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಘುವೀರ್ ಎಂ. | ಪ್ರಮಾಣ ಮಾಡಿದ ದಿನಾಂಕ 12.08.2022 |
| ತಂದೆ/ಗಂಡನ ಹೆಸರು | : | ಮಾದಪ್ಪ ಜಿ | |
| ವಯಸ್ಸು | : | 29 ವರ್ಷ | |
| ವೃತ್ತಿ | : | ಕೃಷಿ ಅಧಿಕಾರಿ, ಹನೂರು | **CW**/1 |
| ವಾಸಸ್ಥಳ | : | ನಂಚೆಒಡೆಯರ ದೊಡ್ಡಿ | **PW**/1 |

<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>

ನಾನು ನವೆಂಬರ್ 2018 ರಿಂದ ಇಲ್ಲಿಯ ವರೆಗೂ ಕೃಷಿ ಅಧಿಕಾರಿಯಾಗಿ, ರೈತ ಸಂಪರ್ಕ ಕೇಂದ್ರ ಹನೂರಿನಲ್ಲಿ ಕೆಲಸ ನಿರ್ವಹಿಸುತ್ತಾ ಬಂದಿದ್ದೇನೆ.

2019 ರ ಲೋಕಸಭಾ ಚುನಾವಣೆಯ ಅಂಗವಾಗಿ ಮಾರ್ಚ್ 10 2019 ರಿಂದ ಏಪ್ರಿಲ್ 18 2019 ರ ವರೆಗೆ ನನ್ನನ್ನು ಫ್ಲೈಯಿಂಗ್ ಸ್ಕ್ವಾಡ್ ಆಗಿ ನೇಮಕ ಮಾಡಲಾಗಿರುತ್ತದೆ.

ದಿನಾಂಕ 15.04.2019 ರ ಕನ್ನಡ ಪ್ರಭ ಪತ್ರಿಕೆಯಲ್ಲಿ ದಿನಾಂಕ 14.04.2019 ರಂದು ಹೊಂಗನೂರು ಗ್ರಾಮದಲ್ಲಿ ಯಾವುದೇ ಪೂರ್ವಾನುಮತಿ ಪಡೆಯದೇ ನ್ಯಾಯಾಲಯದ ಮುಂದಿರುವ ಆರೋಪಿತನು ಚುನಾವಣಾ ಪ್ರಚಾರವನ್ನು ಮಾಡಿರುವುದಾಗಿ ವರದಿ ಬಂದಿರುತ್ತದೆ. ನಾನು ಈ ದಿನ ಪತ್ರಿಕೆಯನ್ನು ದಿನಾಂಕ 15.04.2019 ರ ದಿನಪತ್ರಿಕೆಯನ್ನು ನೋಡಿರುತ್ತೇನೆ. ಸಾಕ್ಷಿಯು ಸದರಿ ದಿನದ ದಿನಪತ್ರಿಕೆಯನ್ನು ನೋಡಿ ಗುರುತಿಸಿದ ಕಾರಣ, ದಿನಪತ್ರಿಕೆಯನ್ನು ನಿಪಿ–1 ಎಂದು ಗುರುತಿಸಲಾಯಿತು.

ನಾನು ನಿಪಿ–1 ನ್ನು ಓದಿ ತಿಳಿದುಕೊಂಡ ಕೂಡಲೇ ನ್ಯಾಯಾಲಯದ ಮುಂದಿರುವ ಆರೋಪಿತನು ಸದರಿ ಚುನಾವಣೆ ಪ್ರಚಾರ ಮಾಡಲು ಅನುಮತಿ ಪಡೆದುಕೊಂಡಿರುತ್ತಾನೋ ಇಲ್ಲವೊ ಎಂದು ಸಹಾಯಕ ಚುನಾವಣಾಧಿಕಾರಿ, ಕಛೇರಿ ಕೊಳ್ಳೇಗಾಲ ಇಲ್ಲ ವಿಚಾರಿಸಿರುತ್ತೇನೆ. ನನಗೆ ಆರೋಪಿತನು ಅನುಮತಿಯನ್ನು ಪಡೆದುಕೊಂಡಿಲ್ಲವೆಂದು ಆಗ ಸ್ಪಷ್ಟವಾಗಿ ಗೊತ್ತಾಗಿರುತ್ತದೆ. ನಂತರ ದಿನಾಂಕ 15.04.2019 ರಂದು ಚಾಮರಾಜನಗರ ಪೂರ್ವ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಪ್ರಥಮ ಲಿಖಿತ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು

ತಾವು ನೀಡಿದ ಪ್ರಥಮ ಲಿಖಿತ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ–2 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಸಂಜೆ 5–30 ರಿಂದ 6–30 ರ ವರೆಗೆ ನಾನು ಸ್ಥಳ ಮಹಜರ್ ಮಾಡಿರುತ್ತೇನೆ. ಚಾಸಾ–2 ಮತ್ತು 3 ರವರ ಸಮಕ್ಷಮ ನಾನು ಸ್ಥಳ ಮಹಜರ್ ಮಾಡಿರುತ್ತೇನೆ. ಸಾಕ್ಷಿಯು ಸ್ಥಳ ಮಹಜರ್ ನೋಡಿ ಗುರುತಿಸಿದ ಕಾರಣ ಅದನ್ನು ಈಗ ನಿಪಿ–3 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ನಿಪಿ–3 ನ್ನು ನಾನು ಚಾಸಾ–2 ಮತ್ತು 3 ರವರಿಗೆ ಓದಿ ತಿಳಿಸಿ ಅವರ ಸಹಿಗಳನ್ನು ನಿಪಿ–3 ಕ್ಕೆ ಪಡೆದುಕೊಂಡಿರುತ್ತೇನೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಮರು ಹೇಳಿಕೆಯನ್ನು ನೀಡಿರುತ್ತೇನೆ. ನಾನು ಪೊಲೀಸರಿಗೆ ಆರೋಪಿತನು ಅನುಮತಿಯನ್ನು ಪಡೆಯದೇ ಸಭೆಯನ್ನು ಮಾಡಿರುತ್ತಾನೆ ಎಂಬ ವಿಷಯವಾಗಿ ಮರು ಹೇಳಿಕೆ ನೀಡಿರುತ್ತೇನೆ.

ನಾನು ಚಾಸಾ–2 ಮತ್ತು 3 ರವರನ್ನು ವಿಚಾರಿಸಿದಾಗ ಅವರುಗಳು ನನಗೆ ಆರೋಪಿತನು ಪೂರ್ವಾನುಮತಿ ಇಲ್ಲದೇ ಸಭೆಯನ್ನು ಮಾಡಿರುವುದಾಗಿ ನನಗೆ ತಿಳಿಸಿರುತ್ತಾನೆ. ಈ ವಿಷಯದ ಕುರಿತಾಗಿ ನಾನು ಮೇಲೆ ಹೇಳಿದಂತೆ ಪೊಲೀಸರಿಗೆ ಮರು ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ. (ನ್ಯಾಯಾಲದ ಬೆಳಗಿನ ಅವಧಿ ಮುಕ್ತಾಯವಾಗಿರುತ್ತದೆ ಆದ್ದರಿಂದ ಪಾಟೀ ಸವಾಲನ್ನು ಮಧ್ಯಾಹ್ನ 2–45 ಕ್ಕೆ ಮುಂದೂಡಲಾಗಿರುತ್ತದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

12.08.2022.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.

ಸಾಕ್ಷಿಯನ್ನು ಮತ್ತೆ ಮದ್ಯಾಹ್ನದ ಅವದಿಯಲ್ಲಿ ಕರೆಯಿಸಿ, ವಿಧಿಬದ್ದವಾಗಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಎಂ.ಆರ್ ರವರಿಂದಃ

ನನ್ನನ್ನು ಸಂತೆಮರಹಳ್ಳಿ ಮತ್ತು ಯಳಂದೂರು ಸರಹದ್ದಿಗೆ **Flying squad** ಆಗಿ ನೇಮಕ ಮಾಡಲಾಗಿತ್ತು. ನನ್ನ ಕೆಲಸ ಅವಧಿಯು ಮ. 2.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ ಇತ್ತು. ದಿನಾಂಕ 14.04.2019 ರಂದು ನಾನು ಕುದೇರು, ಸಂತೇಮರಹಳ್ಳಿ, ಜನ್ನೂರು ಹೊಸೂರು, ಕಮರವಾಢಿ ಮತ್ತು ಉಮ್ಮತ್ತೂರು ಸ್ಥಳಗಳಲ್ಲಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ. ಸದರಿ ದಿನದಂದು ಹೊಂಗನೂರು ಕಡೆಗೆ ಯಾರು ಹೋಗಿದ್ದರು ಎಂಬ ಪ್ರಶ್ನೆಗ ಸಾಕ್ಷಿಯು ಯಾರು ಹೋಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಮದ್ಯಾಹ್ನ 02.00 ಗಂಟೆಗೆ ನಿಪಿ.1 ನ್ನು ಮೊದಲನೆ ಬಾರಿಗೆ ಓದಿರುತ್ತೇನೆ. ನಾನು ನಿಪಿ.1 ನ್ನು ಸಹಾಯಕ ಚುನಾವಣಾ ಅಧಿಕಾರಿಗಳ ಕಛೇರಿ ಕೊಳ್ಳೇಗಾಲ ಇಲ್ಲಿ ಓದಿರುತ್ತೇನೆ. ನಾನು ನಿಪಿ.1 ನ್ನು ಓದಿದ ಕೂಡಲೇ ರವಿ ಎಂಬುವರಿಂದ ವಿಚಾರವನ್ನು ಸ್ಪಷ್ಟೀಕರಿಸಿಕೊಂಡಿರುತ್ತೇನೆ. ರವಿಯು ಸಹಾಯಕ ಚುನಾವಣಾ ಅಧಿಕಾರಿಗಳ ಕಛೇರಿಯಲ್ಲಿದ್ದರು. 5 ನಿಮಿಷದಲ್ಲಿ ನಾನು ರವಿರವರಿಂದಈ ವಿಚಾರವನ್ನು ಸ್ಪಷ್ಟೀಕರಿಸಿಕೊಂಡಿರುತ್ತೇನೆ. ನಿಪಿ.1 ರಲ್ಲಿ ಆರೋಪಿತನು ಚುನಾವಣಾ ಪ್ರಚಾರವನ್ನು ಮಾಡಿರುತ್ತಾನೆಂದು ಬಂದಿತ್ತು. ನಿಪಿ.1 ರಲ್ಲಿ ಕಾಗಲವಾಡಿ ಎಂ .ಶಿವಣ್ಣ, ಕೆಪಿಸಿಸಿ ಕಾರ್ಯದರ್ಶಿ ಎಸ್ ಸಿ ಬಸವರಾಜು, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಹೆಚ್ ಪಿ ಚಂದ್ರು , ಮೂಗೂರು ಬಸವರಾಜು, ಕಂದಹಳ್ಳಿ ಮಹೇಶ್, ಆಲೂರು ಪ್ರದೀಪ್, ಆರ್ ಮಹದೇಶ್ , ಕಣ್ಣೇಗಾಲ ನಾಗೇಶ ನಾಯಕ ಪ್ರಸನ್ನ ಇವರುಗಳ ಹೆಸರು ಆರೋಪಿತನ ಇತ್ತು. ಮೇಲ್ಕಾಣಿಸಿದ ಎಲ್ಲಾರು ಆರೋಪಿತನನ್ನು ಸೇರಿಸಿ ಚುನಾವಣಾ ಪ್ರಚಾರವನ್ನು ಮಾಡುತ್ತಿದ್ದರು ಎಂದು ನಿಪಿ.1 ರಲ್ಲಿ ಇರುತ್ತದೆ. ಮೆಲ್ಕಾಣಸಿದ ಎಲ್ಲರೂ ಚುನಾವಣಾ ಪ್ರಚಾರಕ್ಕೆ ಅನಮತಿಯುನ್ನು ಪಡೆದಿರುವುದಿಲ್ಲ ಸಾಕ್ಷಿಯು ಮುಂದುವರಿದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಮಾತ್ರ ತಮ್ಮ ಪಕ್ಷದ ಪರವಾಗಿ ಅನುಮತಿಯನ್ನು ಪಡೆಯಬೇಕಾಗಿರುತ್ತದ ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿ ಆರೋಪಿತನು ಮತ್ತು ಇತರರು ಯಾವ ದಿನಾಂಕದಂದು ಮತ್ತು ಎಲ್ಲಿ ಚುನಾವಣಾ ಪ್ರಚಾರವನ್ನು ಮಾಡುತ್ತಿದ್ದರು ಎಂದು ಇಲ್ಲ ಎಂದರೆ ಸರಿಯಲ್ಲ. ನಾನು ಪತ್ರಿಕಾ ಸಂಪಾದಕನನ್ನು ಸಂಪರ್ಕಿಸಿ ವಿಚಾರವನ್ನು ಖಾತ್ರಿ ಪಡಿಸಿಕೊಂಡಿರುವುದಿಲ್ಲ . ಪತ್ರಿಕಾ ಸಂಪಾದಕನನ್ನು ಸಂಪರ್ಕಿಸಿ ನಾನು ವಿಚಾರವನ್ನು ಖಾತ್ರಿ ಪಡಿಸಿಕೊಳ್ಳಬಹುದಾಗಿತ್ತು ಎಂದರೆ

ಸಾಕ್ಷಿಃಯು ಆಗಾಗಲೇ ಪತ್ರಿಕೆಯಲ್ಲಿ ವಿಚಾರವು ಪ್ರಕಟಗೊಂಡ ಕಾರಣ ತಾವು ಸಂಪಾದಕನನ್ನು ಸಂಪರ್ಕಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಕೊಳ್ಳೆಗಾಲದ ಸಹಾಯಕ ಚುನಾವಣಾ ಅಧಿಕಾರಿಗಳ ಕಛೇರಿಯಲ್ಲಿ ಮ. 2 ಗಂಟೆಯಿಂದ ಸುಮಾರು ಕೇವಲ 5 ನಿಮಿಷಗಳ ಕಾಲ ಇದ್ದೆ. ರಾಮಸಮುದ್ರದಿಂದ ಕೊಳ್ಳೇಗಾಲಕ್ಕೆ ಸುಮಾರು 25 ಕಿ.ಮೀ ಅಂತರ ಇರತ್ತುದೆ. ಇದರ ಅಂತರ ಕಿ.ಮೀ 40 ಎಂದರೆ ನನಗೆ ಗೊತ್ತಿಲ್ಲ. ನಾನು ಚಾಮರಾಜನಗರ ಪೂರ್ವ ಪೊ.ಠಾಣೆಗೆ ಬಂದು ನಿಪಿ.2 ನ್ನು ನೀಡಿದಾಗ ಸಮಯ ಮದ್ಯಾಹ್ನ 2.30 ಗಂಟೆಯಾಗಿತ್ತು. ನಿಪಿ.2 ನ್ನು ನಾನು ಪೊ.ಠಾಣೆಯಲ್ಲೇ ಬರೆದಿರುತೇನೆ. ನಾನು ಪೊ . ಠಾಣೆಯಲ್ಲಿ ಸಂಜೆ ಸುಮಾರು 4.00 ಗಂಟೆಯವರೆಗೆ ಇದ್ದೆ. ನಾನು ಅದೇ ದಿನ ಸಂಜೆ 5.30 ಸಮಯಕ್ಕೆ ಸ್ಥಳಕ್ಕೆ ಹೋಗಿ ವಿಚಾರವನ್ನು ಮಾಡಿರುತ್ತೇನೆ.

ನಾನು ಚಾಮರಾಜನಗರ ಪೂರ್ವ ಪೊ. ಠಾಣೆಗೆ ಹೋಗಬೇಕಾದರೆ ಹೊಂಗನೂರು ಮುಖಾಂತರ ಹೋಗಿರುತ್ತೇನೋ ಇಲ್ಲವೊ ಈಗ ನೆನಪಿಲ್ಲ. ನಾನು ನಿಪಿ. 1 ನ್ನು ಓದಿದ ನಂತರ ಸ್ಥಳಕ್ಕೆ ಹೋಗಿ ವಿಚಾರಿಸಬಹುದಾಗಿತ್ತು ಎಂದರೆ ಸಾಕ್ಷಿಯು ತಮ್ಮ ಮೇಲಾಧಿಕಾರಿಯಾದ ರವಿಯವರು ಬೇಡ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ರವಿಯವರ ಮಾತನ್ನು ಕೇಳಿ ನಾನು ನಿಪಿ.2 ನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಂಚರು ಸ್ಥಳದಲ್ಲಿಯೇ ನಮಗೆ ಸಿಕ್ಕಿರುತ್ತಾರೆ. ಸ್ಥಳಕ್ಕೆ ನಾನು, ಗೋವಿಂದರಾಜು ಮತ್ತು ಶಕ್ರುನಾಯಕ ಎಂಬುವವರು ಸ್ಥಳಕ್ಕೆ ಹೋಗಿರುತ್ತೇವೆ. ನಾವು ಹೋದಾಗ ಸ್ಥಳದಲ್ಲಿ ಸುಮಾರು 4-5 ಜನರು ಇದ್ದರು. ಸ್ಥಳ ಮಹಜರ್ ಗೆ ಶಕ್ರುನಾಯಕ ಮತ್ತು ಗೋವಿದರಾಜು ರವರು ಸಹಿಯನ್ನು ಮಾಡಿರುವುದಿಲ್ಲ. ಸದರಿಯವರ ಸಹಿಗಳನ್ನು ನಿಪಿ.3 ಕ್ಕೆ ಪಡೆದುಕೊಳ್ಳಲು ಯಾವುದಾದರೂ ತೊಂದರೆ ಇತ್ತೆ ಎಂಬ ಪ್ರಶ್ನೆಗೆ ಸಾಕ್ಷಿಯು ತಮಗೆ ಅದರ ಅವಶ್ಯಕತೆ ಕಂಡು ಬಂದಿರುವುದಿಲ್ಲ ಎಂದುನುಡಿಯುತ್ತಾರೆ. ನಾನು ಹೇಳಿದ ದಿನದಂದು ನಾನು ಸ್ಥಳಕ್ಕೆ ಹೋಗಿಲ್ಲದ ಕಾರಣ ನಾನು ಇವರುಗಳ ಸಹಿಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಚಾಸಾ- 2 ಮತ್ತು 3 ರವರುಗಳ ಸಹಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ.3 ನ್ನು ಪೊ .ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 14.04.2019 ರಂದು ಅರೋಪಿತನು ಪ್ರಚಾರವನ್ನು ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ನಿಪಿ.1 ರಲ್ಲಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿತನನ್ನು ಇದೇ

**PW**–1

**CC** 440 **of** 2019

ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ  ಎಂದರೆ ಸರಿಯಲ್ಲ. ಚುನಾವಣಾ ಪ್ರಚಾರದ ಸಲುವಾಗಿ  ಅನುಮತಿಯನ್ನು ಸಹಾಯಕ ಚುನಾವಣಾ ಅಧಿಕಾರಿಗಳ ಕಛೇರಿಯಲ್ಲಿ ಪಡೆದುಕೊಳ್ಳಬೇಕಾಗಿರುತ್ತದೆ.  ಆರೋಪಿತನು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂಬುದರ ಬಗ್ಗೆ ನಾನು ದಾಖಲಾತಿಗಳನ್ನು   ನೋಡಿಲ್ಲ. ನಾನು ಸ್ಥಳಕ್ಕೆ ಹೋದಾಗ ಪ್ರಚಾರಕ್ಕೆ ಬಳಸಿರಬಹುದಾದ ಬ್ಯಾನರ್ಗಳು ಪಾಂಪ್ ಲೆಟ್ಸ್  ಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ ಸಾಕ್ಷಿಯು ಮುಂದುವರಿದು ಆ ರೀತಿಯ ಯಾವುದೇ ವಸ್ತುಗಳು ಕಂಡು ಬಂದಿರುವುದಿಲ್ಲ.  ಈ ರೀತಿ ಪ್ರಚಾರ ನಡೆದಿದ್ದರೆ ಸ್ಥಳದಲ್ಲಿ  ಪಾಂಪ್ ಲೆಟ್ಸ್ ಗಳು ಅಥವಾ  ಬ್ಯಾನರ್ ಗಳು  ಸಿಗಬೇಕಾಗಿತ್ತು  ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ಅಪರಾದವನ್ನು ಎಸಗಿರುವುದಿಲ್ಲ ಎಂದರೆ ನಿಪಿ.1 ರಲ್ಲಿ  ಬಂದಿರುತ್ತದೆ ಎಂದು ನುಡಿಯುತ್ತಾರೆ. ನನಗೆ ಖುದ್ದಾಗಿ ಆರೋಪಿತನು ಅಪರಾದ ಕೃತ್ಯವನ್ನು ಎಸಗಿರುತ್ತಾನೆ ಎಂದು ಮಾಹಿತಿ ಇಲ್ಲ ಎಂದರೆ ನಿಜ.  ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿ ಆರೋಪಿತನ ಈ ಸುಳ್ಳು ಪ್ರಕರಣವನ್ನು ದಾಖಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ನಾನು ಹೇಳಿದಂತೆ ಯಾವುದೇ  ಅಪರಾಧವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

12.08.2022.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.